# ಬೆಂಗಳೂರು ವಿಶ್ವವಿದ್ಯಾಲಯ
## ಪರೀಕ್ಷಾ ವಿಭಾಗ, ಜ್ಞಾನಭಾರತಿ, ಬೆಂಗಳೂರು – 560 056.

ಸಂ: ಇ.ಎಕ್ಸ್–2/ಪಿಹೆಚ್.ಡಿ/ನೋಂ/2023–24. ದಿನಾಂಕ: 05.06.2023

**ಸುತ್ತೋಲೆ**

ಬೆಂಗಳೂರು ವಿಶ್ವವಿದ್ಯಾಲಯವು 2023ನೇ ಸಾಲಿನ ಪಿಹೆಚ್.ಡಿ ಪದವಿ ಪ್ರವೇಶಕ್ಕೆ ದಿನಾಂಕ: 17.04.2023 ರಿಂದ ಅಂತರ್ಜಾಲದಲ್ಲಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿರುತ್ತಾರೆ. ವಿದ್ಯಾರ್ಥಿಗಳು ಸಲ್ಲಿಸಿರುವ ಅರ್ಜಿಗಳನ್ನು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರುಗಳು ವಿದ್ಯಾರ್ಥಿಗಳ ದಾಖಲಾತಿಗಳನ್ನು ನಿಯಮಾನುಸಾರ ಪರಿಶೀಲಿಸಿ ಅರ್ಹ ವಿದ್ಯಾರ್ಥಿಗಳ ಅರ್ಹತಾ ಪಟ್ಟಿಯನ್ನು ಸಿದ್ಧಪಡಿಸಿ ರವಾನಿಸಿರುತ್ತಾರೆ. ಅದಕ್ಕನುಸಾರವಾಗಿ ತಾತ್ಕಾಲಿಕ ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ವಿದ್ಯಾರ್ಥಿಗಳಿಂದ ಆಕ್ಷೇಪಣೆಯನ್ನು ಆಹ್ವಾನಿಸುವ ದಿನಾಂಕ, ಅಂತಿಮ ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರಕಟಿಸುವ ದಿನಾಂಕ, ಪಿಹೆಚ್.ಡಿ ಪ್ರವೇಶ ಪರೀಕ್ಷೆಯನ್ನು ನಡೆಸುವ ದಿನಾಂಕ ಮತ್ತು ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ನಡೆಸುವ ದಿನಾಂಕವನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿದೆ.

| ಕ್ರ.ಸಂ | ತಾತ್ಕಾಲಿಕ ವೇಳಾಪಟ್ಟಿ | ದಿನಾಂಕ |
|---|---|---|
| 1. | ತಾತ್ಕಾಲಿಕ ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರಕಟಿಸುವ ದಿನಾಂಕ | 05.06.2023 |
| 2. | ತಾತ್ಕಾಲಿಕ ಅರ್ಹ ವಿದ್ಯಾರ್ಥಿಗಳ ಪಟ್ಟಿಯಲ್ಲಿ ಏನಾದರೂ ಆಕ್ಷೇಪಣೆಗಳಿದ್ದರೆ, ಮುಂದೆ ಸೂಚಿಸಿರುವ ದಿನಾಂಕದೊಳಗೆ ವಿದ್ಯಾರ್ಥಿಗಳು ಆಕ್ಷೇಪಣೆಯನ್ನು ಸಲ್ಲಿಸುವ ದಿನಾಂಕ | 12.06.2023 |
| 3. | ಅಂತಿಮ ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರಕಟಿಸುವ ದಿನಾಂಕ | 15.06.2023 |
| 4. | ಪಿಹೆಚ್.ಡಿ. ಪ್ರವೇಶ ಪರೀಕ್ಷೆಯನ್ನು ನಡೆಸುವ ದಿನಾಂಕ | 16.07.2023 |
| 5. | ಜ್ಯೇಷ್ಠತಾ ಪಟ್ಟಿ ಪ್ರಕಟಿಸುವ ದಿನಾಂಕ | 21.07.2023 |
| 6. | ಅರ್ಹ ವಿದ್ಯಾರ್ಥಿಗಳಿಗೆ ಪಿಹೆಚ್.ಡಿ ಸೀಟುಗಳ ಹಂಚಿಕೆಗಾಗಿ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ನಡೆಸುವ ದಿನಾಂಕ | 26.07.2023 |

5/6/23

ಕುಲಸಚಿವರು (ಮೌಲ್ಯಮಾಪನ)

ಗೆ,

ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳು/ನಿರ್ದೇಶಕರುಗಳು ಹಾಗೂ ಸಂಯೋಜಿತ ಸ್ನಾತಕೋತ್ತರ ಕೇಂದ್ರಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 56.

ಪ್ರತಿಗಳು:

1. ಸಮನ್ವಯಾಧಿಕಾರಿಗಳು – ಪಿಹೆಚ್.ಡಿ ನೋಂದಣಿ 2023, ಬೆಂ.ವಿ.ವಿ.,
2. ಆಪ್ತ ಕಾರ್ಯದರ್ಶಿಗಳು/ಮಾನ್ಯ ಕುಲಪತಿಗಳು/ಕುಲಸಚಿವರು/ಬೆಂ.ವಿ.ವಿ. ಬೆಂಗಳೂರು.
3. ಶ್ರೀಮತಿ. ಸುಜಾತ, ಸಿಸ್ಟಮ್ ಅನಾಲಿಸ್ಟ್, ಬೆಂ.ವಿ.ವಿ.,
4. ಇನ್ನಾಕ್ ಐಟಿ ಸಲ್ಯೂಷನ್ಸ್, ಪ್ರೈ.ಲಿ., ಬೆಂಗಳೂರು.
5. ಕಛೇರಿ ಪ್ರತಿ.